*P.W-1*

**<u>ದಿನಾಂಕಃ 04-03-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.</u>**

**<u>ಮುಂದುವರೆದ ಮುಖ್ಯ ವಿಚಾರಣೆ: ಅರ್ಜಿದಾರ ಪರ ವಕೀಲರಾದ ಶ್ರೀಮತಿ ಕೆ.ಜೆ.ಎ ವಕೀಲರಿಂದಃ</u>**

ದಿಃ 14-05-2022 ರಂದು ಎದುರುದಾರ ರಾತ್ರಿ ನನಗೆ ಕೈಯಿಂದ ಹೊಡೆದಾಡಿದ ಮತ್ತು ಮಕ್ಕಳಿಗೆ ಚಪ್ಪಲಿಯಿಂದ ಹೊಡೆದ ಆಗ ನಾನು ರಾಣೇಬೆನ್ನೂರಿನ ಗ್ರಾಮಾಂತರ ಪೋಲಿಸ್ ಠಾಣೆಗೆ ಹೋದೆ , ಪೋಲಿಸರು ಪೋನ್ ಮಾಡಿದಾಗ ಎದುರುದಾರ ತಾನು ಹೊಡೆದಿರುವುದಿಲ್ಲ ಎಂದು ಹೇಳಿದ ಮತ್ತು ಹೇಗೆ ಆಕೆ ಹೋಗಿದ್ದಾಳೆ ಹಾಗೆ ಬರಲಿ ಎಂದು ಹೇಳಿ ಪೋಲಿಸ್ ಠಾಣೆಗೂ ಸಹ ಬರಲಿಲ್ಲ . ದಿಃ 30-06-2022 ರಂದು ಪೋಲಿಸರು ಎದುರುದಾರನ ತಂದೆ-ತಾಯಿಗಳಿಗೆ ಹೋಗಿ ವಿಚಾರಿಸಿದ ನಂತರ ಎದುರುದಾರ, ಆತನ ತಾಯಿ , ಆತನ ಅಣ್ಣ ಮತ್ತು ಆತನ ಮಾವ ಎಲ್ಲರೂ ಸೇರಿ ಪೋಲಿಸ್ ಸ್ಟೇಶನ್ ಗೆ ಬಂದಿದ್ದಾರೆ . ಪೋಲಿಸ್ ಠಾಣೆಯಲ್ಲಿ ಎದುರುದಾರ, ಆತನ ತಾಯಿ , ಆತನ ಅಣ್ಣ ಮತ್ತು ಆತನ ಮಾವ ಪೋಲಿಸರಿಗೆ ಅವರವರೇ ಜಗಳ ಮಾಡಿದ್ದಾರೆ ಅದಕ್ಕೂ ಮತ್ತು ನಮಗೆ ಏನು ಸಂಬಂಧ ಇಲ್ಲ ಎಂದು ಹೇಳಿ ಹೋದರು

ಆಗ ನಾನು ನನ್ನ ತವರು ಮನೆಗೆ ಹೋಗಿದ್ದೇನೆ .

ಎದುರುದಾರ ಪೆಂಟಿಂಗ್ ಕೆಲಸ ಮಾಡುತ್ತಾನೆ , ಹರಿಹರದಲ್ಲಿ ಒಂದು ಗುಂಟೆ ಸ್ವಂತ ಜಾಗೆ ಮತ್ತು ಚಳಗೇರಿಯಲ್ಲಿ ಒಂದು ಸ್ವಂತ ಮನೆ ಹಾಗು ಚಳಗೇರಿಯಲ್ಲಿ ಸರ್ವೇ ನಂ.86/14 ರಲ್ಲಿ 1 ಎಕರೆ 5 ಗುಂಟೆ ಜಮೀನು ಇದೆ . ಎದುರುದಾರನಿಗೆ ಸದರಿ ಜಮೀನಿನಿಂದ ವಾರ್ಷಿಕವಾಗಿ 2 ½ ಯಿಂದ 3 ಲಕ್ಷ ರೂಪಾಯಿ ಆದಾಯ ಇದೆ. ನಾನು ಏನು ಕೆಲಸ ಮಾಡುವುದಿಲ್ಲ. ಎದುರುದಾರನಿಗೆ ಪ್ರತಿ ತಿಂಗಳು 50 ಸಾವಿರ ರೂಪಾಯಿ ಆದಾಯ ಇದೆ .

2 ಮತ್ತು 3 ನೇ ಅರ್ಜಿದಾರರು ಶಾಲೆಗೆ ಹೋಗುತ್ತಿದ್ದಾರೆ ಅವರ ವಿದ್ಯಾಭ್ಯಾಸದ ಖರ್ಚು ಮತ್ತು ಮನೆಯ ಬಾಡಿಗೆ ಹಾಗು 1 ರಿಂದ ದ 3 ನೇ ಅರ್ಜಿದಾರರ ಬಟ್ಟೆ, ಊಟ ಹಾಗು ವಸತಿ ಮತ್ತು ಔಷಧೋಪಚಾರಕ್ಕಾಗಿ ಪ್ರತಿ ತಿಂಗಳು ತಲಾ ರೂ.10,000/- ಗಳ ಅವಶ್ಯಕತೆ ಇದೆ .

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಬೇಡಿರುವುದರಿಂದ

***P.W-1***

ಮುಂದೂಡಲಾಗಿದೆ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

sd/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,

ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.